ದಿಃ 22.07.2025

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ಹೊಳಲ್ಕೆರೆ.**

**ಸಿ ಸಿ ನಂಃ 1643/2024**

| | | | | |
|---|---|---|---|---|
| ಸಾಕ್ಷಿದಾರರ ಹೆಸರು | : ರಾಮು.ಎಸ್.ಎಂ | | ಪಿ.ಡಬ್ಲ್ಯೂ | : 1 |
| ತಂದೆಯ ಹೆಸರು | : ಸುರೇಶ್ | | ಸಿ.ಡಬ್ಲ್ಯೂ | : 1 |
| ವಯಸ್ಸು | : 22 ವರ್ಷ | | ದಿನಾಂಕ | :22.07.2025 |
| ಉದ್ಯೋಗ | : ಕೂಲಿ ಕೆಲಸ | | | |
| ವಾಸಸ್ಥಳ | : ಹೊಳಲ್ಕೆರೆ ಟೌನ್ | | | |

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ ರವರಿಂದಃ**

ನ್ಯಾಯಾಲಯದ ಮುಂದೆ ಇರುವ ಆರೋಪಿ ನನಗೆ ಗೊತ್ತಿಲ್ಲ. ಚಾಸಾ–2, 3, 4 ಮತ್ತು 9 ನನಗೆ ಗೊತ್ತಿಲ್ಲ.

ಸಾಕ್ಷಿಗೆ ಈ ಹಂತದಲ್ಲಿ ಒಂದು ದಾಖಲೆಯನ್ನು ತೋರಿಸಿದ್ದು, ಸದರಿ ದಾಖಲೆಯು ದಿಃ28.03.2024 ರಂದು ಪಂಚರಿಗೆ ನೀಡಿದ ನೋಟೀಸ್ ಆಗಿದ್ದು, ಸದರಿ ನೋಟೀಸ್ ನಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿ ದಾಖಲೆಯನ್ನು ನಿಪಿ–1 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ–1(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಈ ಹಂತದಲ್ಲಿ ಇನ್ನೊಂದು ದಾಖಲೆಯನ್ನು ತೋರಿಸಿದ್ದು, ಸದರಿ ದಾಖಲೆಯು ದಿಃ28.03.2024 ರಂದು ಶೋಧನಾ ಸಮುಚಿತ ವಾರೆಂಟ್ ಆಗಿದ್ದು, ಸದರಿ ವಾರೆಂಟ್ ನಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿ ದಾಖಲೆಯನ್ನು ನಿಪಿ–2 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ–2(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಈ ಹಂತದಲ್ಲಿ ಇನ್ನೊಂದು ದಾಖಲೆಯನ್ನು ತೋರಿಸಿದ್ದು, ಸದರಿ ದಾಖಲೆಯು ದಿಃ 28.03.2024 ರಂದು ಈ ಪ್ರಕರಣದಲ್ಲಿ ವಶಪಡಿಸಿಕೊಳ್ಳಲಾದ ಸ್ವತ್ತಿನ ಪಟ್ಟಿಯಾಗಿದ್ದು, ಸದರಿ ಸ್ವತ್ತಿನ ಪಟ್ಟಿಯಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿ ದಾಖಲೆಯನ್ನು ನಿಪಿ–3 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ–3(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಈ ಹಂತದಲ್ಲಿ ಒಂದು ದಾಖಲೆಯನ್ನು ತೋರಿಸಿದ್ದು, ಸದರಿ ದಾಖಲೆಯು ದಿಃ28.03.2024 ರಂದು ಈ ಪ್ರಕರಣದಲ್ಲಿ ತಯಾರಿಸಿದ ಮಾದರಿ ಮೊಹರಿನ ನಕಲಾಗಿದ್ದು,

ದಿಃ 22.07.2025

ಸದರಿ ಮಾದರಿ ಮೊಹರಿನ ನಕಲನ್ನು ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿ ದಾಖಲೆಯನ್ನು ನಿಪಿ-4 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಈ ಹಂತದಲ್ಲಿ ಒಂದು ದಾಖಲೆಯನ್ನು ತೋರಿಸಿದ್ದು, ಸದರಿ ದಾಖಲೆಯು ಈ ಪ್ರಕರಣದಲ್ಲಿ ದಿಃ28.03.2024 ರಂದು ಮಾಡಿದ ಸ್ಥಳ ಪಂಚನಾಮೆಯಾಗಿದ್ದು, ಸದರಿ ಸ್ಥಳ ಪಂಚನಾಮೆಯನ್ನು ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿ ದಾಖಲೆಯನ್ನು ನಿಪಿ-5 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು.

ಈ ಪ್ರಕರಣದಲ್ಲಿ ವಶಪಡಿಸಿಕೊಳ್ಳಲಾದ ವಸ್ತುಗಳ ಮೇಲೆ ಅಂಟಿಸಿರುವ ಪಂಚರ ಸಹಿಯುಳ್ಳ ಮಾದರಿ ಚೀಟಿಯನ್ನು ತೋರಿಸಿದ್ದು, ಸದರಿ ಚೀಟಿಯಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿ ಪ್ರಕರಣದಲ್ಲಿ ವಶಪಡಿಸಿಕೊಳ್ಳಲಾದ ಮುದ್ದೆ ಮಾಲಿನ ವಸ್ತುಗಳನ್ನು ಎಂ.ಓ.1 ಎಂದು ಗುರುತಿಸಲಾಯಿತು. ಸದರಿ ಎಂ.ಓ.1 ರ ಮೇಲಿ ಅಂಟಿಸಿರುವ ಸಾಕ್ಷಿಯ ಸಹಿಯುಳ್ಳ ಚೀಟಿಯನ್ನು ಎಂ.ಓ.1(ಎ) ಎಂದು ಗುರುತಿಸಲಾಯಿತು.

ನಿಪಿ-1 ರಿಂದ 5 ಮತ್ತು ಎಂ.ಓ.1 ರ ಮೇಲಿನ ಸಹಿಯನ್ನು ಈಗ್ಗೆ ಸುಮಾರು 01 ವರ್ಷಗಳ ಹಿಂದೆ ಹೊಳಲ್ಕೆರೆಯಲ್ಲಿ ಅಬಕಾರಿ ಪೊಲೀಸ್ ನವರು ಸದರಿ ಸಹಿಗಳನ್ನು ಪಡೆದಿರುತ್ತಾರೆ. ನಾನು ನಿಪಿ-5 ಕ್ಕೆ ಸಹಿ ಮಾಡುವಾಗ ಬೇರೆ ಯಾರು ನನ್ನ ಸಮಕ್ಷಮ ಸಹಿ ಮಾಡಿಲ್ಲ. ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ ಮತ್ತು ಯಾವುದೇ ವಸ್ತುಗಳನ್ನು ಮತ್ತು ಮಧ್ಯವನ್ನು ವಶಪಡಿಸಿಕೊಂಡಿಲ್ಲ. ನಿಪಿ.1 ರಿಂದ 5 ರಲ್ಲಿ ಏನು ಬರೆದಿದೆ ಎಂಬುದು ನನಗೆ ಗೊತ್ತಿಲ್ಲ ಮತ್ತು ಪೊಲೀಸರು ನನಗೆ ಓದಿ ಹೇಳಿಲ್ಲ ಮತ್ತು ಪೊಲೀಸರು ಮುಂದೆ ಯಾವುದೇ ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಸಾಕ್ಷಿಯು ವ್ಯತಿರಿಕ್ತವಾಗಿ ಸಾಕ್ಷ್ಯ ನುಡಿಯುತ್ತಿದ್ದು, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರುತ್ತಾರೆ. ಅನುಮತಿ ನೀಡಲಾಯಿತು)

<u>ಪಾಟೀ ಸವಾಲುಃ ಮಾನ್ಯ ಸ.ಸ.ಅ ರವರಿಂದಃ</u>

ದಿ:28.03.2024 ರಂದು ಬೆಳಿಗ್ಗೆ 11.30 ಗಂಟೆ ಸಮಯದಲ್ಲಿ ಗುಂಡೇರಿ ಗ್ರಾಮದಿಂದ ಆವಿನಕಟ್ಟೆ ಗ್ರಾಮಕ್ಕೆ ಹೋಗುವ ರಸ್ತೆಯಲ್ಲಿ ನಿಂತಿದ್ದ ನನ್ನ ಮತ್ತು ಚಾಸಾ-2 ರವರ ಬಳಿ ಅಬಕಾರಿ ಅಧಿಕಾರಿಗಳು ಬಂದು ನಮ್ಮನ್ನು ಕರೆದು ಪರಿಚಯಿಸಿಕೊಂಡಿದ್ದರು ಎಂದರೆ

ಸರಿಯಲ್ಲ. ಸದರಿ ಮಾರ್ಗದಲ್ಲಿ ಅವರು ರಸ್ತೆ ಗಾವಲು ಮಾಡುತ್ತೇವೆ ಏನಾದರೂ ಕ್ರಮಗಳು ಕಂಡು ಬಂದರೆ ಆ ಸಮಯದಲ್ಲಿ ಪಂಚರಾಗಿ ಇದ್ದು, ಸಹಕರಿಸಬೇಕೆಂದು ನಮ್ಮನ್ನು ಕೇಳಿಕೊಂಡಿದ್ದು, ನಾನು ಒಪ್ಪಿರುತ್ತೇನೆಂದರೆ ಸರಿಯಲ್ಲ. ನಂತರ ಅಧಿಕಾರಿ ಮತ್ತು ಸಿಬ್ಬಂದಿಗಳು ರಸ್ತೆಗಾವಲು ನೆಡೆಸುತ್ತಿರುವ ಒಬ್ಬ ಆಸಾಮಿಯು ಒಂದು ದ್ವಿಚಕ್ರ ವಾಹನದಲ್ಲಿ ಎರಡು ಕಾಲುಗಳ ಮಧ್ಯ ಒಂದು ಚೀಲವನ್ನು ಇಟ್ಟುಕೊಂಡು ಬರುತ್ತಿರುವುದು ಕಂಡು ಬಂತು ಎಂದರೆ ಸರಿಯಲ್ಲ. ಸದರಿ ವಾಹನವನ್ನು ಅಧಿಕಾರಿಗಳು ತಡೆದು ನಿಲ್ಲಿಸಿ ಅನುಮಾನದಿಂದ ಸದರಿ ಚೀಲದಲ್ಲಿ ಏನಿದೆ ಎಂದು ಕೇಳಲಾಗಿ ಸಮವಸ್ತ್ರದಲ್ಲಿ ಇದ್ದ ಅಧಿಕಾರಿ ಮತ್ತು ಸಿಬ್ಬಂದಿಗಳನ್ನು ಕಂಡು ಗಾಬರಿಗೊಂಡು ಆತ ತನ್ನ ಹೆಸರು ಕರಿಯಪ್ಪ ತಂದೆ ತಿಪ್ಪೇಸ್ವಾಮಿ, ಬೊಮ್ಮನಕಟ್ಟೆ ಗ್ರಾಮ ಎಂದು ತಿಳಿಸಿದ್ದನ್ನು ಎಂದರೆ ಸರಿಯಲ್ಲ. ಸದರಿ ವಾಹನ ಮತ್ತು ಚೀಲವನ್ನು ಪರಿಶೀಲಿಸಲು ಮತ್ತು ಶೋಧನೆ ಮಾಡಲು ಶೋಧನಾ ವಾರೆಂಟ್ ಅನ್ನು ತರಲು ಕಾಲವಕಾಶ ಇಲ್ಲದ ಕಾರಣ ಸ್ಥಳದಲ್ಲಿಯೇ ಶೋಧನಾ ವಾರೆಂಟ್ ಅನ್ನು ತಯಾರಿಸಿ ಅಧಿಕಾರಿಗಳ ಸಹಿ ಮತ್ತು ನಮ್ಮಗಳ ಸಹಿ ಪಡೆದು ನಮ್ಮಲ್ಲಿ ಯಾವುದೇ ಅಬಕಾರಿ ಪದಾರ್ಥಗಳು ಇಲ್ಲವೆಂಬುದನ್ನು ಖಚಿತ ಪಡಿಸಿಕೊಂಡು ಅಂಗಶೋಧನೆಯನ್ನು ಮಾಡಿಕೊಂಡು ನಂತರ ಆಸಾಮಿಯ ಚೀಲವನ್ನು ಕೆಳಗೆ ಸುರಿದು ಪರಿಶೀಲಿಸಿ ನೋಡಿದಾಗ ಮಧ್ಯ ತುಂಬಿದ ಟೇಟ್ರಾ ಪ್ಯಾಕೆಟ್ ಇರುವುದು ಕಂಡು ಬಂದಿತ್ತು ಎಂದರೆ ಸರಿಯಲ್ಲ. ನಂತರ ಅವುಗಳನ್ನು ಎಣಿಕೆ ಮಾಡಿ ನೋಡಲಾಗಿ 1. 0.90 ಮಿಲಿಯ ಓರಿಜಿನಲ್ ಚಾಯ್ಸ್ ವಿಸ್ಕಿಯ 96 ಟೇಟ್ರಾ ಪ್ಯಾಕೆಟ್ ಇರುವುದು ಕಂಡು ಬಂದಿತ್ತು ಎಂದರೆ ಸರಿಯಲ್ಲ. ಎಲ್ಲಾ ಮಧ್ಯದ ಟೇಟ್ರಾ ಪ್ಯಾಕೆಟ್ ಗಳು ಒಟ್ಟು 8.640 ಲೀಟರ್ ಇದ್ದವು ಎಂದರೆ ಸರಿಯಲ್ಲ. ತನದನಂತ ಅಧಿಕಾರಿಗಳು ದ್ವಿಚಕ್ರ ವಾಹನವನ್ನು ಪರಿಶೀಲಿಸಲಾಗಿ ಕಪ್ಪು ಹಸಿರು ಮಿಶ್ರಿತ ಟಿವಿಎಸ್ ಎಕ್ಸ್ ಎಲ್ 100 ದ್ವಿಚಕ್ರ ವಾಹನ ಆಗಿದ್ದು, ಅದರ ನಂ.ಕೆಎ–16–ಎಲ್ 1505 ಆಗಿದ್ದು, ಅಧಿಕಾರಿಗಳು ಆತನನ್ನು ವಿಚಾರಿಸಲಾಗಿ ಆತನ ಬಳಿ ಸರ್ಕಾರದ ಯಾವುದೇ ಪರವಾನಿಗೆ ಇಲ್ಲವೆಂದು ತಿಳಿಸಿರುತ್ತಾನೆಂದರೆ ಸರಿಯಲ್ಲ. ನಂತರ ವಶಪಡಿಸಿಕೊಂಡ ಟೇಟ್ರಾ ಪ್ಯಾಕೆಟ್ ಗಳನ್ನು ಮಾದರಿಗಾಗಿ ತೆಗೆದು ಒಂದು ಬಿಳಿ ಬಣ್ಣದ ಬಟ್ಟೆಯಲ್ಲಿ ಸುತ್ತಿ ದಾರದಿಂದ ಕಟ್ಟಿ ಇಲಾಖೆಯ ಸೀಲ್ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಮಾದರಿ ಮೊಹರಿನ ನಕಲು ಮತ್ತು ಮಾದರಿ ಚೀಟಿಗಳನ್ನು ತಯಾರಿಸಿ ನಮ್ಮ ಸಹಿಗಳನ್ನು ಪಡೆದು ಸದರಿ ವಸ್ತುಗಳ ಮೇಲೆ ಅಂಟಿಸಿರುತ್ತಾರೆ ಎಂದರೆ ಸರಿಯಲ್ಲ. ನಂತರ ಮುದ್ದೆ ಮಾಲುಗಳನ್ನು ಇಲಾಖೆಯ ವಶಕ್ಕೆ ಪಡೆದು ಆರೋಪಿಗೆ

ದಿಃ 22.07.2025

ನೋಟೀಸ್ ಜಾರಿ ಮಾಡಿ ವಿಚಾರಣೆಗೆ ಹಾಜರಾಗುವಂತೆ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ನಿಪಿ–5 ನ್ನು ನಮ್ಮ ಸಮಕ್ಷಮ ಬೆಳಿಗ್ಗೆ 11.30 ರಿಂದ 10.40 ರವರೆಗೆ ಜರುಗಿಸಿರುತ್ತಾರೆ ಎಂದರೆ ಸರಿಯಲ್ಲ.

ದಿಃ12.08.2024 ರಂದು ಈ ಮೇಲೆ ಹೇಳಿದಂತೆ ಅಬಕಾರಿ ಪೊಲೀಸರ ಮುಂದೆ ಈ ಮೇಲೆ ಹೇಳಿದಂತೆ ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಅಲ್ಲಗಳೆದ ಹೇಳಿಕೆಯನ್ನು ನಿಪಿ–6 ಎಂದು ಗುರುತಿಸಲಾಯಿತು.

ನ್ಯಾಯಾಲಯದ ಮುಂದಿರುವ ಒಟ್ಟು ಮಧ್ಯದ ಪೌಚ್ ಗಳನ್ನು ನನ್ನ ಸಮಕ್ಷಮ ನಿಪಿ–5 ರಂತೆ ಮಹಜರ್ ನಂತೆ ಸದರಿ ಸ್ಥಳದಲ್ಲಿ ರಾಸಾಯನಿಕ ಪರೀಕ್ಷೆಗಾಗಿ ವಶಪಡಿಸಿಕೊಂಡರು ಎಂದರೆ ಸರಿಯಲ್ಲ. ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯವನ್ನು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು**:** ಆರೋಪಿತರ ಪರವಾಗಿ **:** ಇರುವುದಿಲ್ಲ

ಮರು ವಿಚಾರಣೆ **:**ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳ್ಚುಪಡಿಸಿದೆ)

ಓ ಹೇ ಕೇ ಸರಿ ಇದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಹೊಳಲ್ಕೆರೆ.